Medicos of Mysore State working or studying abroad

182. Sri I. SOMASHEKARAPPA (Hosanagar).—

Will the Minister for Health be pleased to state :—

(*a*) the number of medicos from Mysore State, who are either working or studying abroad;

(*b*) whether there is any proposal before the Government to absorb all of them and provide them appointment in the posts in which they are specialised, if they are returned to India ?

Sri K. PUTTASWAMY (Minister for Law, Labour and Parliamentary Affairs) [On behalf of SRI Y. RAMAKRISHNA (Minister for Health)].—

(*a*) Government has no information.

(*b*) Does not arise in view of the reply to (*a*).

ಶ್ರೀ ಐ. ಸೋಮಶೇಖರಪ್ಪ.—ಎಷ್ಟು ಜನ ಡಾಕ್ಟರುಗಳು ಪರದೇಶಗಳಿಗೆ ಹೋಗಿದ್ದಾರೆ ಎಂದು ಅಂಕೆ ಸಂಖ್ಯೆಗಳನ್ನು ಕೇಳಿದ್ದೇನೆ. ದೇಶದ ಡಾಕ್ಟರಾಗಲಿ, ಯಾರೇ ಆಗಲಿ, ಹೊರಗಡೆ ಹೋಗುವಾಗ ಅದು ಹೋಂ ಡಿಪಾರ್ಟ್‌ಮೆಂಟಿನ ಗಮನಕ್ಕೆ ಬರುವುದಿಲ್ಲವೇ, ಹಾಗೆ ಅದನ್ನು ವೈದ್ಯಕೀಯ ಇಲಾಖೆಯವರು ಹೋಂ ಡಿಪಾರ್ಟ್‌ಮೆಂಟಿನಿಂದ ಮಾಹಿತಿ ತರಿಸಿಕೊಂಡು ಕೊಡಲು ಏನು ತೊಂದರೆಯಾಗಿತ್ತು ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಹತ್ತಿರ ಸಮಾಚಾರ ಇಲ್ಲ. ಹೊರಗಡೆ ಹೋಗಬೇಕಾದರೆ, ನಮ್ಮ ಹೋಂ ಡಿಪಾರ್ಟ್‌ಮೆಂಟ್ ಪಾಸ್‌ಪೋರ್ಟ್ ಕೊಡುವುದಿಲ್ಲ, ಕೇಂದ್ರ ಸರ್ಕಾರದವರು ಕೊಡುವುದು. ಆದ್ದರಿಂದ ಆ ಸಮಾಚಾರ ನಮ್ಮಲ್ಲಿ ಇಲ್ಲವೆಂದು ಹೇಳಿದೆ.

ಶ್ರೀ ಐ. ಸೋಮಶೇಖರಪ್ಪ.—ಆದರೂ ಅದು ನಿಮ್ಮ ಹೋಂ ಡಿಪಾರ್ಟ್‌ಮೆಂಟಿಗೆ ಬರುತ್ತದೆಯೋ, ಇಲ್ಲವೊ ?

ಶ್ರೀ ಕೆ. ಪುಟ್ಟಸ್ವಾಮಿ.—ಬಹುಶಃ ಎನ್‌ಕ್ವಾಯರಿಗೆ ಬರುತ್ತದೆಂದು ಕಾಣುತ್ತದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಅನೇಕ ವಿದ್ಯಾರ್ಥಿಗಳು ತಮ್ಮ ಖರ್ಚಿನಲ್ಲಿ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳು ಕೊಡುತ್ತಿರುವ ಸ್ಕಾಲರ್‌ಶಿಪ್‌ನಲ್ಲಿ ಹೋಗಿ ಕಲಿತು ಮತ್ತೆ ನಮ್ಮ ರಾಜ್ಯದಲ್ಲಿ ಸೇವೆ ಮಾಡಬೇಕೆಂಬ ಆಶೆ ಇದ್ದರೂ, ಇಲ್ಲಿ ಸರಿಯಾದ ಅವಕಾಶ ಇಲ್ಲದಿರುವುದರಿಂದ, ಈ ರಾಜ್ಯವನ್ನು ಬಿಟ್ಟು ಅವರು ಅಲ್ಲೇ ಸೆಟ್ಲ್ ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರಿಗೆ ಸೇವೆ ಮಾಡುವ ಅಪೇಕ್ಷೆ ಇದ್ದರೆ, ಸೇವೆ ಮಾಡುವ ಅವಕಾಶಗಳು ಹೇರಳವಾಗಿವೆ. ಅವರು ಸರ್ಕಾರಿ ನೌಕರಿಯನ್ನು ಬಯಸಿದರೆ, ಪಬ್ಲಿಕ್ ಸರ್ವಿಸ್ ಕಮಿಶನ್ ಆಗಿಂದಾಗ್ಗೆ ಖಾಲಿ ಸ್ಥಾನಗಳಿಗೆ ಭರ್ತಿ ಮಾಡುವುದಕ್ಕೆ ಅರ್ಜಿ ಕರೆಯುತ್ತಾರೆ, ಆಗ ಅರ್ಜಿಹಾಕಿಕೊಳ್ಳಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಂದು ಕಡೆ ಡಾಕ್ಟರ್ ಇಲ್ಲವೆಂದು ಹೇಳುತ್ತೀರಿ. ಒಂದು ಕಡೆ ಅಲ್ಲಿಂದ ಬಂದ ಡಾಕ್ಟರುಗಳನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಪಬ್ಲಿಕ್ ಸರ್ವಿಸ್ ಕಮಿಶನ್ನಿನವರು ವರ್ಷಕ್ಕೆ ಒಂದು ಸಾರಿ ಅರ್ಜಿ ಕರೆಯುತ್ತಾರೆ. ಒಂದು ಸಾರಿ ಕರೆದರೆ, ಅದಕ್ಕೆ 6 ತಿಂಗಳು ಫೈನಲೈಸ್ ಮಾಡುವುದಕ್ಕೆ ಸಮಯ ತೆಗೆದುಕೊಳ್ಳುತ್ತಾರೆ. ವಿದ್ಯಾರ್ಥಿಗಳು ಅಲ್ಲಿಂದ ಬಂದು ಸೆಂಟ್ರಲ್ ಪೂಲಿನಲ್ಲಿ ಒಂದು ವರ್ಷ ಕೆಲಸ ಮಾಡುತ್ತಾರೆ. ಅಂಥವರಿಗೆ ಕೂಡ ನಂಬಿಕೆ ಸರಿಯಾಗಿ ಕೊಡುತ್ತಾ ಇಲ್ಲ. ಆದ್ದರಿಂದ ಅಂಥವರಿಗೆ ಕೆಲಸ ಕೊಟ್ಟು, ಡಾಕ್ಟರು ಇಲ್ಲವೆನ್ನುವ ಕಷ್ಟವನ್ನು ಪರಿಹರಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಡಾಕ್ಟರುಗಳ ಅಭಾವ ಇದೆಯೆಂದು ಹೇಳುವುದು ಸರಿಯಲ್ಲ. ಸಾಕಷ್ಟು ವೈದ್ಯರು ಇದ್ದಾರೆ. ಪಬ್ಲಿಕ್ ಸರ್ವಿಸ್ ಕಮಿಶನ್ನಿನಲ್ಲಿ ನಿರ್ಧಾನವಾಗುತ್ತದೆಂದು ಹೇಳುವುದೂ ಸರಿಯಿಲ್ಲ. ಯಾರಾದರೂ ಅರ್ಜಿ ಹಾಕಿದರೆ, ಖಾಲಿ ಇರುವ ಜಾಗಕ್ಕೆ ನೇಮಿಸು

ತ್ತಾರೆ. ಹೊರಗಡೆಯಿಂದ ಬರತಕ್ಕವರು ವಿಶೇಷವಾಗಿ ಯಾವುದಾದರೂ ಒಂದು ವಿಚಾರದಲ್ಲಿ ಪರಿಣತರಾದವರು ಇರುತ್ತಾರೆ. ಅವರಿಗೆ ಇಲ್ಲಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೂ ಅವಕಾಶ ಉಂಟು. ಸರ್ಕಾರಿ ನೌಕರಿ ಅಪೇಕ್ಷೆಪಟ್ಟರೆ ಸರ್ಕಾರ ಯಾರನ್ನೂ ನೇರವಾಗಿ ನೇಮಿಸುವುದಕ್ಕೆ ಅವಕಾಶವಿಲ್ಲ. ಪಿ. ಎಸ್. ಸಿ. ಮೂಲಕವಾಗಿ ನೇಮಿಸಿಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ನಮ್ಮ ಸಂಸ್ಥಾನದಿಂದ ಅಲ್ಲಿಗೆ ಹೋಗಿದ್ದಾರೆ, ಮತ್ತು ಕೆಲವರು ಅವರ ಸ್ವಂತ ಖರ್ಚಿನಲ್ಲಿ ಪರದೇಶಕ್ಕೆ ಹೋಗಿದ್ದಾರೆ. ಅವರು ವಾಪಸ್ಸು ಇಲ್ಲಿ ಸೇವೆ ಸಲ್ಲಿಸುವುದಕ್ಕೆ ಯಾವಾಗ ಬರುತ್ತಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಇಲ್ಲಿಂದ ಹೊರಗೆ ಯಾವಾಗ ಹೋಗಬೇಕೆಂದು ಅಪೇಕ್ಷೆ ಪಡುತ್ತಾರೋ, ಆಗ ನಾನಾ ಮಾರ್ಗಗಳನ್ನು ಕಲ್ಪನೆ ಮಾಡಿಕೊಂಡು ಹೋಗಿ, ಅಲ್ಲಿ ವಿದ್ಯಾಭ್ಯಾಸ ಮುಗಿಸಿ ಅಪೇಕ್ಷೆ ಪಟ್ಟಾಗ ಹಿಂದಕ್ಕೆ ಬರುತ್ತಾರೆ.

Afforestation in Kolonykatte Becharag Village of Bhadravathi Taluk

202. Sri ABDUL KHUDDUS ANWAR (Bhadravathi).—

Will the Minister of State for Forests be pleased to state :—

(*a*) the extent of actual land brought under afforestation in Bhadravathi taluk and amount spent over it;

(*b*) the amount spent on Kolony Katte Bechirag Villages in Bhadravathi taluk for afforestation;

(*c*) whether there is any representation to transfer back the lands of the Kolony Katte Bechirag Villages to Revenue Department since Forest Department has not carried on afforestation in the land even after spending large sums of money;

(*d*) whether the raiyats who were in possession of the said lands have paid the malki charges for these lands;

(*e*) whether there is any representation to the Government that the residents of the locality are prepared to settle there provided the lands are granted and 3 tanks are repaired which can irrigate about 600 acres of land ?

Sri ALUR HANUMANTHAPPA (Minister of State for Forests).—

(*a*) 2,850 acres have been afforested spending an amount of Rs. 2,78,880.

(*b*) Rs. 60,004-50.

(*c*) Yes.

(*d*) No.

(*e*) Yes.